ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಕಾವೇರಿ ಭವನದ ಎದುರು, ಕೆ.ಜಿ.ರಸ್ತೆ, ಬೆಂಗಳೂರು–560 009**

ಸಂಖ್ಯೆ: CAC-4/ GPTR-2022/2021–22 ದಿನಾಂಕ:19–11–2022

## ಪ್ರಕಟಣೆ

ಪದವೀಧರ ಪ್ರಾಥಮಿಕ ಶಿಕ್ಷಕ (6 ರಿಂದ 8ನೇ ತರಗತಿ) ವೃಂದದ ಹುದ್ದೆಗಳಿಗೆ ನೇಮಕಾತಿಗೆ ಸಂಬಂಧಿಸಿದಂತೆ 1:2 ಅನುಪಾತದ ಅಭ್ಯರ್ಥಿಗಳ ಪರಿಶೀಲನಾ ಪಟ್ಟಿಯನ್ನು ದಿನಾಂಕ: 27–09–2022 ರಂದು ಬೆಂಗಳೂರು ವಿಭಾಗದ, 28–09–2022 ಬೆಳಗಾವಿ ವಿಭಾಗದ ಮತ್ತು ದಿನಾಂಕ:29–09–2022 ರಂದು ಮೈಸೂರು ಹಾಗೂ ಕಲ್ಬುರ್ಗಿ ವಿಭಾಗದ ಜಿಲ್ಲೆಗಳ ಪರಿಶೀಲನಾ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು. ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳ ಮೂಲದಾಖಲೆಗಳ ಪರಿಶೀಲನೆಯನ್ನು ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ನೇಮಕಾತಿ ಪ್ರಾಧಿಕಾರ ರವರ ಕಛೇರಿ ಹಂತದಲ್ಲಿ ನಿಯಮಾನುಸಾರ ಕೈಗೊಂಡು, ಅಗತ್ಯ ಮಾಹಿತಿಗಳನ್ನು ಸಿ.ಎ.ಸಿ ದತ್ತಾಂಶದಲ್ಲಿ ಇಂದೀಕರಿಸಿದಂತೆ ಪರಿಗಣಿಸಿ, 1:1 ತಾತ್ಕಾಲಿಕ ಆಯ್ಕೆಪಟ್ಟಿಯನ್ನು ದಿನಾಂಕ:18–11–2022 ರಂದು ಪ್ರಕಟಿಸಲಾಗಿದೆ.

ಪ್ರಕಟಿತ 1:1 ತಾತ್ಕಾಲಿಕ ಪಟ್ಟಿಯಲ್ಲಿ ಹೊಸದಾಗಿ 18 ಅಭ್ಯರ್ಥಿಗಳು ಆಯ್ಕೆಯಾಗಿದ್ದು, ಪಟ್ಟಿಯನ್ನು ಇದರೊಂದಿಗೆ ಇಲಾಖಾ ವೆಬ್‌ಸೈಟ್ https://schooleducation.kar.nic.in ನಲ್ಲಿ ಪ್ರಕಟಿಸಿದೆ. ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳು ತಮ್ಮ ಮೂಲದಾಖಲೆಗಳೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಹಾಗೂ ನೇಮಕಾತಿ ಪ್ರಾಧಿಕಾರ ರವರ ಕಛೇರಿಯಲ್ಲಿ ದಿನಾಂಕ:21–11–2022 ರಿಂದ 24–11–2022 ರವರೆಗೆ ದಾಖಲೆಗಳ ಪರಿಶೀಲನೆಗೆ ತಪ್ಪದೇ ಹಾಜರಾಗುವಂತೆ ತಿಳಿಸಿದೆ. ನಿಗದಿತ ದಿನಾಂಕದೊಳಗೆ ಹಾಜರಾಗದ ಅಭ್ಯರ್ಥಿಗಳನ್ನು ಸದರಿ ನೇಮಕಾತಿಯ ಮುಂದಿನ ಪ್ರಕ್ರಿಯೆಗಳಿಗೆ ತಮ್ಮನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ